**ಪಿ . ಡಬ್ಲು:2**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕಃ 06-02-2026.**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರ** ಪರ ಕುಮಾರಿ ಎನ್.ಎನ್.ಪಿ, ಕೆ.ಪಿ. ಎಸ್ ವಕೀಲರ ಪರವಾಗಿ

ಈ ಪ್ರಕರಣದಲ್ಲಿ ನಾನು ಅರ್ಜಿದಾರನಿರುತ್ತೇನೆ. ಪ್ರಕರಣಕ್ಕೆ ಸಂಬಂಧಪಟ್ಟಂತೆ ಒಂದು ಪ್ರ.ವ ವರದಿ, ಪಿರ್ಯಾದಿ , ಪಂಚನಾಮೆ, ನಕ್ಷೆ, ಗಾಯದ ಪ್ರಮಾಣ ಪತ್ರ, ಐ ಎಮ್ ವರದಿ ಮತ್ತು ಚಾರ್ಜಶೀಟ್ ಪ್ರತಿಯನ್ನು ಹಾಜರು ಪಡಿಸಿದ್ದೇನೆ, ಅವುಗಳನ್ನು ನಿಪಿ-1 ರಿಂದ 7 ಎಂದು ಗುರುತಿಸಲಾಯಿತು. ಅದೇ ರೀತಿ ಸ್ವಯಂ ದೃಢೀಕರಿಸಿದ ಆಧಾ ಪ್ರತಿ, ಪಾನ ಕಾರ್ಡ ಹಾಜರು ಪಡಿಸಿರುತ್ತೇನೆ(ಸಾಕ್ಷಿ ಸದ್ರಿ ದಾಖಲೆಗಳ ಮೂಲ ಪ್ರತಿಗಳನ್ನು ಹಾಜರು ಪಡಿಸಿದ್ದು ಸದ್ರಿ ದಾಖಲೆಗಳನ್ನು ನಿಪಿ-8 ಮತ್ತು 9 ಎಂದು ಗುರುತಿಸಿ, ಮೂಲ ದಾಖಲೆಗಳನ್ನು ಸಾಕ್ಷಿಗೆ ಹಿಂದಿರುಗಿಸಲಾಯಿತು.). ಅದೇ ರೀತಿ ಎರುಡು ಡಿಸ್ಚಾರ್ಜ ಸಮ್ಮರಿ ಹಾಜರು ಪಡಿಸಿರುತ್ತೇನೆ, ಅವುಗಳನ್ನು ನಿಪಿ-10 ಎಂದು ಗುರುತಿಸಲಾಯಿತು. ಅದೇ ರೀತಿ ಒಂದು ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ಹಾಜರು ಪಡಿಸಿರುತ್ತೇನೆ. ಸದ್ರಿ ದಾಖಲೆಯನ್ನು ಗುರುತಿಸಲು ಎರಡನೇ ಎದ್ರುದಾರ ಪರ ವಕೀಲರು ತಕರಾರು ಎತ್ತಿರಿರುತ್ತಾರೆ ಆದ್ದರಿಂದ ಸದ್ರಿ ದಾಖಲೆಯನ್ನು ಸಾಬೀತು ಪಡಿಸುವ ತಕರಾರಿಗೆ ಒಳಪಟ್ಟು ನಿಪಿ-12 ಎಂದು ಗುರುತಿಸಲಾಯಿತು. ನಾಲ್ಕು ಪೋಟೋ ಮತ್ತು ಸಿಡಿಯನ್ನು ಹಾಜರು ಪಡಿಸಿದ್ದೇನೆ ಅವುಗಳನ್ನು ಒಟ್ಟಾಗಿ 13 ಎಂದು ಗುರುತಿಸಲಾಯಿತು. ಅದೇ ರೀತಿ 34 ಔಷದಿ ವೆಚ್ಚ ರಶೀದಿಯನ್ನು ಹಾಜರು ಪಡಿಸಿದ್ದೇನೆ, ಅವುಗಳನ್ನು ಕ್ರಮವಾಗಿ ನಿಪಿ-14 ರಿಂದ 47 ಎಂದು ಗುರುತಿಸಲಾಯಿತು. ಸದ್ರಿ 2ನೇ ಎದ್ರುದಾರ ಪರ ವಕೀಲರು ನಿಪಿ-17,18,23 ಮತ್ತು 29 ದಾಖಲೆಗಳನ್ನು ಗುರುತಿಸಲು ತಕರಾರು ಎತ್ತಿರುತ್ತಾರೆ. ಆದ್ದರಿಂದ ಅವುಗಳನ್ನು ಸಾಬೀತು ಪಡಿಸುವ ತಕರಾರಿಗೆ ಒಳಪಟ್ಟು ಗುರುತಿಸಲಾಗಿದೆ.

ಆದ್ದರಿಂದ ನನ್ನ ಅರ್ಜಿಯನ್ನು ಪುರಸ್ಕರಿಸಬೇಕಾಗಿ ವಿನಂತಿ.

ಇಸಿಎ .01/2024

**ಪಿ . ಡಬ್ಲು:2**

**ದಿನಾಂಕಃ** 06-02-2026.

**ಪಾಟೀಸವಾಲುಃ-** 1 ಮತ್ತು 2ನೇ ಎದ್ರುದಾರರ ಪರ ವಕೀಲರಿಂದ,

ಈ ಹಂತದಲ್ಲಿ 1ನೇ ಎದ್ರುದಾರ ಮತ್ತು ಅವರ ಪರ ವಕೀಲರು ಗೈರು ಹಾಜರ ಇರುತ್ತಾರೆ.

2ನೇ ಎದ್ರುದಾರ ಪರ ವಕೀಲರು ಹಾಜರು ಇದ್ದು, ಪಾಟೀ ಸವಾಲ ಮಾಡಲು ಕಾಲವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದ**

**Sd/-**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ**